<u>**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**</u>

<u>**ಸಿ.ಸಿ.ನಂಃ 397/2025**</u>

**ಫಿರ್ಯಾದುದಾರರು:**

ಸರಕಾರದ ಪರವಾಗಿ,
ಮುಂಡಗೋಡ ಪೋಲಿಸ್ ಠಾಣೆ,
ಮುಂಡಗೋಡ.

**- ವಿರುದ್ಧ -**

**ಆರೋಪಿ:**

ಕಿರಣ ಪ್ರಕಾಶ ಸಾಳುಂಕೆ,
ಪ್ರಾಯ: 29 ವರ್ಷ, ಉ: ಕೂಲಿ ಕೆಲಸ ,
ಸಾ: ಆನಂದನಗರ, ಮುಂಡಗೋಡ.

<u>**:ದೋಷಾರೋಪಣೆ :**</u>

ಅಕ್ಷತಾ ಸಿ.ಆರ್. ಬಿ.ಬಿ.ಎ.,ಎಲ್‌ಎಲ್‌ಬಿ.(ಹಾನರ್ಸ) ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಮುಂಡಗೊಂಡ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ-

ಮುಂಡಗೋಡ ಪೋಲಿಸ ಠಾಣೆಯ ಸರಹದ್ದಿನಲ್ಲಿ ಆರೋಪಿತನಾದ ನೀವು ಚಾ.ಸಾ-1 ನೇಯವರಿಗೆ ದಿನಾಂಕ 15-01-2024 ರಂದು ರೂ.3,00,000/- ಹಣವನ್ನು ಸಾಲವಾಗಿ ನೀಡಿ ಮಾರ್ಚ್ ತಿಂಗಳಿನಿಂದ ಅದಕ್ಕೆ ಪ್ರತಿ ತಿಂಗಳು ರೂ. 20,000/- ಬಡ್ಡಿಯಂತೆ ಪಡೆದುಕೊಂಡಿದ್ದು, ಒಟ್ಟು ರೂ.1,80,000/- ಬಡ್ಡಿಯನ್ನು ಪಡೆದುಕೊಂಡು, ಡಿಸೆಂಬರ್ ತಿಂಗಳಿನಿಂದ ಫಿರ್ಯಾದಿಯವರು ಬಡ್ಡಿಯನ್ನು ಕೊಡದಿರುವುದರಿಂದ ಆರೋಪಿತನಾದ ನೀವು ದಿನಾಂಕ 29-01-2025 ರಂದು ಬೆಳಗ್ಗೆ 10-00 ಗಂಟೆಯ ಸುಮಾರಿಗೆ ಕಂಬಾರಗಟ್ಟಿ ಕ್ರಾಸ್ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಏಕಾಏಕಿ ಅವರನ್ನು ಅಡ್ಡಗಟ್ಟಿ ತಡೆದ ಪರಿಣಾಮ ಭಾರತೀಯ ನ್ಯಾಯ ಸಂಹಿತಾ ಕಲಂ 126(2) ರಡಿಯಲ್ಲಿ ಶಿಕ್ಷಿಸಲ್ಪಡುವ ಆಪಾದನೆಯನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಸದ್ರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಫಿರ್ಯಾದಿಯವರೊಂದಿಗೆ ಜಗಳ ತೆಗೆದು ಅವಾಚ್ಯವಾಗಿ ಬೈಯ್ದು ಪರಿಣಾಮ, ಆರೋಪಿತನಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 352 ರಡಿಯಲ್ಲಿ ಶಿಕ್ಷಿಸಲ್ಪಡುವ ಆಪಾದನೆಯನ್ನು ಎಸಗಿದ್ದು, ಅದು

ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಸದ್ರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀವು ಫಿರ್ಯಾದಿಯವರಿಗೆ ಕುತ್ತಿಗೆಯನ್ನು ಹಿಡಿದು ದೂಡಿ ಹಾಕಿ ಕೈಯಿಂದ ಅವರ ಕಪಾಳಕ್ಕೆ ಹೊಡೆದ ಪರಿಣಾಮ, ಆರೋಪಿತನಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 115(2) ಸಹಿತ 3(5) ರಡಿಯಲ್ಲಿ ಶಿಕ್ಷಿಸಲ್ಪಡುವ ಆಪಾದನೆಯನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಕೊನೆಯದಾಗಿ, ಸದ್ರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀವು ಫಿರ್ಯಾದಿಯವರಿಗೆ ಎರಡು ದಿನದಲ್ಲಿ ಕೊಡಬೇಕಾದ ಹಣವನ್ನು ಕೊಡದೆ ಹೋದರೆ ಅವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿದ ಪರಿಣಾಮ, ಆರೋಪಿತನಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 351(2) ಸಹಿತ 3(5) ರಡಿಯಲ್ಲಿ ಶಿಕ್ಷಿಸಲ್ಪಡುವ ಆಪಾದನೆಯನ್ನು ಆಪಾದನೆಯನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲೆ ಹೇಳಲಾದ ಆಪಾದನೆ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಅದರ ವಿಚಾರಣೆ ಆಗಬೇಕೆಂದು ನಾನು ನಿರ್ದೇಶಿಸಿದ್ದೇನೆ.

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ   -   -2026     ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ

**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಸಿ.ಸಿ.ನಂಃ 397/2025</u>**

**ಫಿರ್ಯಾದುದಾರರು:**

ಸರಕಾರದ ಪರವಾಗಿ,
ಮುಂಡಗೋಡ ಪೋಲಿಸ್ ಠಾಣೆ,
ಮುಂಡಗೋಡ.

**– ವಿರುದ್ಧ –**

**ಆರೋಪಿ:**

ಕಿರಣ ಪ್ರಕಾಶ ಸಾಳುಂಕೆ,
ಪ್ರಾಯ: 29 ವರ್ಷ, ಉ: ಕೂಲಿ ಕೆಲಸ,
ಸಾ: ಆನಂದನಗರ, ಮುಂಡಗೋಡ.

**<u>: ಆರೋಪಣೆ :</u>**

ಪ್ರಶ್ನೆ–1: ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ –

ಆರೋಪಿ

ಪ್ರಶ್ನೆ–2: ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ –

ಆರೋಪಿ

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿಃ – –2026

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ